## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂಃ 1139/2014

| | | | |
|---|---|---|---|
| **ಚಾಸಾ ಃ** | **14** | **ಪ್ರಾಸಾಃ-** | **3** |

| | |
|---|---|
| ಹೆಸರು | ವಿ ಕೆ ನರಸಿಂಹರಾವ್ |
| ತಂದೆಯ ಹೆಸರು | ಖಂಡೋಜಿರಾವ್ |
| ವಯಸ್ಸು | 68 |
| ಉದ್ಯೋಗ | ನಿವೃತ್ತ ಜೀವನ |
| ವಿಳಾಸ | ತುಮಕೂರು |

- - - - - - - - - - - - - - - - - - - - - - - - - - - - - - - - -

**ದಿಃ21.05.2024ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ನಾನು ಮೇ 2012 ರಿಂದ ಜೂನ್ 2014 ರವರೆಗೆ ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ಎಎಸ್ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ.09.1.2013 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರಿನ ಆಧಾರದ ಮೇಲೆ ಠಾಣಾ ಗುನ್ನ 18/2013 ಎಂದು ಪ್ರಕರಣ ದಾಖಲಿಸಿಕೊಂಡು ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಕೊಂಡಿರುತ್ತೇನೆ.

ಆದೇ ದಿನ ಸಂಜೆ 5ಃ00 ಗಂಟೆಗೆ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚರ ಸಮಕ್ಷಮ ಪಂಚನಾಮೆ ಮಾಡಿ ಅಪಘಾತಕ್ಕೆ ಒಳಗಾದ ಕಾರ್ ನಂ.ಕೆಎ-05-ಎಂಜೆ-4653 ವಾಹನವನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಅಮಾನತ್ತುಪಡಿಸಿಕೊಂಡ ಕಾರನ್ನು ಮಾಲುಪಟ್ಟಿ

ಸಂಖ್ಯೆ 13/2013 ಎಂದು ದಾಖಲಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅಲ್ಲದೆ ಅಪಘಾತ ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇನೆ. ಸ್ಥಳದಲ್ಲಿ ಚಾಸಾ-2 ರವರ ಹೇಳಿಕೆ ಪಡೆದಿರುತ್ತೇನೆ.

ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-15 ರವರಿಗೆ ನೀಡಿರುತ್ತೇನೆ.

ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-3, ಸಾಕ್ಷಿಯ ಸಹಿಯನ್ನು ನಿಪಿ-3(ಎ), ಪ್ರ.ವ.ವರದಿಯನ್ನು ನಿಪಿ-4, ಸಾಕ್ಷಿಯ ಸಹಿಯನ್ನು ನಿಪಿ-4(ಎ), ನಿಪಿ-1 ರ ಮೇಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ನಿಪಿ-5 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಶ್ರೀ ಸಿಕೆಆರ್ ಆರೋಪಿ ಪರ ವಕೀಲರಿಂದಃ-</u>**

ಸಿಕೆಆರ್ ವಕೀಲರು ಸಿ.ಎಸ್.ಎನ್ ವಕೀಲರ ಪರವಾಗಿ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು, ಯಾವುದೇ ಸಕಾರಣಗಳು ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಃಇಲ್ಲ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಓ ಹೇ ಕೇ ಸ ಇ**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**

# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂಃ 1139/2014

| | | | |
|---|---|---|---|
| **ಚಾಸಾ ಃ** | **17** | **ಪ್ರಾಸಾಃ-** | **4** |

| | |
|---|---|
| ಹೆಸರು | ಸಿ ಸಂಪತ್ ಕುಮಾರ್ |
| ತಂದೆಯ ಹೆಸರು | ಲೇಟ್ ಚಿಕ್ಕಪ್ಪಯ್ಯ |
| ವಯಸ್ಸು | 65 |
| ಉದ್ಯೋಗ | ನಿವೃತ್ತ ಜೀವನ |
| ವಿಳಾಸ | ರಾಮನಗರ |

- - - - - - - - - - - - - - - - - - - - - - - - - - - - - - -

**ದಿಃ21.05.2024ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-</u>**

ನಾನು ದಿ.27.09.2013 ರಿಂದ ದ್ಧಿ.11.5.2015 ರವರೆಗೆ ಹಾರೋಹಳ್ಳಿ ಅರಕ್ಷಕ ವೃತ್ತ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ.01.11.2014 ರಂದು ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-14 ರವರಿಂದ ಪಡೆದಿರುತ್ತೇನೆ. ದಿನಾಂಕ.09.07.2014 ರಂದು ಅಪಘಾತಕ್ಕಿಡಾದ ವಾಹನದ ಮಾಲೀಕರಿಗೆ ನೋಟಿಸ್ ಜಾರಿ ಮಾಡಿರುತ್ತೇನೆ. ಸದರಿ ನೋಟಿಸ್ ನ್ನು ವಿನೋದ್ ಕುಮಾರ್ ರವರು ಪಡೆದುಕೊಂಡಿರುತ್ತಾರೆ. ಸದರಿ ವಿನೋದ್ ಕುಮಾರ್ ಇವರ ಹೇಳಿಕೆಯನ್ನು ಪಡೆದಿರುತ್ತೇನೆ. ಆದೇ ದಿನ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಸಾಕಷ್ಟು ಸಾಕ್ಷ್ಯ ಲಭ್ಯವಾಗಿದ್ದರಿಂದ ನ್ಯಾಯಾಲಯಕ್ಕೆ ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಅಪಘಾತಕ್ಕೆ ಒಳಗಾದ ವಾಹನಕ್ಕೆ ಸಂಬಂಧಿಸಿದ ವಿನೋದ್ ಕುಮಾರ್ ರವರಿಗೆ ಅಧಿಕಾರ ಪತ್ರ ನೀಡಿದ ಬಗ್ಗೆ ದಾಖಲೆಯನ್ನು ನಾನು ತನಿಖೆಯ ಅವಧಿಯಲ್ಲಿ ಕಡತಕ್ಕೆ ಅಳವಡಿಸಿಕೊಂಡಿದ್ದು, ಅದನ್ನು ನಿಪಿ-6, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಶ್ರೀ ಸಿಕೆಆರ್ ಆರೋಪಿ ಪರ ವಕೀಲರಿಂದಃ-</u>**

ಸಿಕೆಆರ್ ವಕೀಲರು ಸಿ.ಎಸ್.ಎನ್ ವಕೀಲರ ಪರವಾಗಿ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು, ಯಾವುದೇ ಸಕಾರಣಗಳು ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಃಇಲ್ಲ**

**(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಡಿಕರೀಸುತ್ತೇನೆ.)**

**ಓ ಹೇ ಕೇ ಸ ಇ**

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ಕನಕಪುರ.**